ಕರ್ನಾಟಕ ಲೋಕಾಯುಕ್ತ

ಉ.ಲೋ.ತ್ರಿ.ಎಸ್.ಉ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಪ್ರಿಡಿ\2849\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26/08/2019

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಹೆಚ್.ಪಿ.ಶೇಷಣ್ಣ, ಸಾಮಾಜಿಕ ಕಾರ್ಯಕರ್ತರು, ಹೆಜ್ಜಿಗೆ ಗ್ರಾಮ, ನಂಜನಗೂಡು ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ಹೆಜ್ಜಿಗೆ ಗ್ರಾಮದ ನಿವಾಸಿಯಾದ ಶ್ರೀ.ಹೆಚ್.ಪಿ.ಶೇಷಣ್ಣ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ 1)ದೇಬೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು 2) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರಾಧಿಕಾರಿ (ಇನ್ನು ಮುಂದೆ ಕ್ರಮವಾಗಿ, '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ಮೈಸೂರು ಜಿಲ್ಲೆ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಜೂಬಿಲಿಯೆಂಟ್ ಜೆನರಿಕ್ ಪ್ರೈ ಲಿ., ಕೈಗಾರಿಕೆಯಿಂದ ಹೊರ ಹೊಮ್ಮುವ ವಿಷಕಾರಿ ತ್ಯಾಜ್ಯ ನೀರನ್ನು ಕಬಿನಿ ನದಿಗೆ ಹಾಗೂ ವಿಷಕಾರಿ ಅನಿಲವನ್ನು ಗಾಳಿಗೆ ಸೇರುತ್ತಿರುವುದರಿಂದ ನದಿ ನೀರು ಮಾಲಿನ್ಯಗೊಂಡು ನೀರನ್ನು ಕುಡಿದ ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ಅನಾರೋಗ್ಯ ಉಂಟಾಗಿರುತ್ತದೆ ಮತ್ತು ಮೀನುಗಳು ಸಾಯುತ್ತಿವೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಎದುರುದಾರರಿಗೆ ಹಲವಾರು ಬಾರಿ ತಿಳಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ—

ದೇಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಲ್ಲಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಜೂಬಿಲಿಯೆಂಟ್ ಜೆನರಿಕ್ಸ್ ಕಾರ್ಖಾನೆಯಿಂದ ಕಲ್ಲಹಳ್ಳಿ ಗ್ರಾಮಸ್ಥರಿಗೆ ತೊಂದರೆ ಉಂಟಾಗಿರುವುದು ಗ್ರಾಮ ಪಂಚಾಯತ್ ಗಮನಕ್ಕೆ ಬಂದು ಹಲವು ಸಾಮಾನ್ಯ ಸಭೆಗಳಲ್ಲಿ ಚರ್ಚೆಯಾಗಿರುವಂತೆ ಕಾರ್ಖಾನೆಯಿಂದ ಹೊರಸೂಸುವ ಗಾಳಿ ಮತ್ತು ತ್ಯಾಜ್ಯದ ಬಗ್ಗೆ ದಿ:21/12/16, 30/01/17, 11/05/17, 21/05/17 ಮತ್ತು 15/06/17ರಂದು ಕಾರ್ಖಾನೆಯೊಂದಿಗೆ ಪತ್ರ ವ್ಯವಹಾರವನ್ನು ಮಾಡಿದೆ. ಕಲ್ಲಹಳ್ಳಿ ಗ್ರಾಮದ ರಾ ಮತ್ತು ಸರ್ಫೇಸ್ ನೀರನ್ನು ಆರ್‌ಡಿಡಬ್ಲ್ಯೂಎಸ್ & ಎಸ್, ಮೈಸೂರು ವಿಭಾಗ ರವರಿಗೆ ದಿ:12/05/17ರಂದು ಕಳುಹಿಸಿ, ನೀರಿನ ಗುಣಮಟ್ಟ ಪರೀಕ್ಷಾ ವರದಿಯನ್ನು ಪಡೆದಿದ್ದು, ಸದರಿ ನೀರು ಕುಡಿಯಲು ಯೋಗ್ಯವಾಗಿದೆಯೆಂದು ವರದಿಯನ್ನು ನೀಡಿದ್ದಾರೆ. ಕಾರ್ಖಾನೆರವರು ಕಬಿನಿ ನಾಲೆಗೆ ಹೊರಬಿಡುತ್ತಿರುವ ಕಲುಷಿತ ನೀರಿನ ಬಗ್ಗೆ ತಾವು ಬರೆದ ಪತ್ರಕ್ಕೆ ಜೀರೋ ಲಿಕ್ವಿಡ್ ಡಿಸ್‌ಚಾರ್ಜ್ ಕಾನ್ಸೆಪ್ಟ್ ಪ್ರಕಾರ ಕಾರ್ಖಾನೆಯು ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿದ್ದಾರೆ. ಗ್ರಾಮಸ್ಥರ ಸಮಸ್ಯೆಗಳಿಗೆ ಪಂಚಾಯತ್ ಖುದ್ದಾಗಿ ಸ್ಪಂದಿಸಿ ಪರಿಹರಿಸುತ್ತಿದ್ದು, ಗ್ರಾಮಸ್ಥರು ಮತ್ತು ಕಾರ್ಖಾನೆಯವರ ಜಗಳದಿಂದ ಸ್ಥಗಿತಗೊಂಡ ಕಾರ್ಖಾನೆಯವರ ಚಿಕಿತ್ಸಾಲಯವು ಸಾರ್ವಜನಿಕರಿಗೋಸ್ಕರ ತೆರೆಯಲು ತಾವು ವೈಯಕ್ತಿಕವಾಗಿ ಗಮನಹರಿಸಿ, ಪ್ರಾಮಾಣಿಕವಾಗಿ ಪ್ರಯತ್ನಪಟ್ಟಿದ್ದು ಯಶಸ್ವೀಯಾಗಿದೆ. ತಮ್ಮಿಂದ ಯಾವುದೇ ಕರ್ತವ್ಯ ಲೋಪ ಆಗಿಲ್ಲ. ದೂರುದಾರರು ಉದ್ದೇಶಪೂರ್ವಕವಾಗಿ ತಮ್ಮ ಮೇಲೆ ಆಪಾದನೆಯನ್ನು ಮಾಡಿದ್ದಾರೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

1) ಜೂಬಿಲಿಯೆಂಟ್ ಜೆನರಿಕ್ಸ್ ಲಿ., ಉದ್ದಿಮೆಯಿಂದ ಹೊರಹೊಮ್ಮುವ ತ್ಯಾಜ್ಯ ನೀರನ್ನು ಶುದ್ಧೀಕರಿಸಲು 240 ಕೆ.ಎಲ್.ಡಿ ಸಾಮರ್ಥ್ಯದ ಶುದ್ದೀಕರಣ ಘಟಕವನ್ನು ಅಳವಡಿಸಿದ್ದು, ಸದರಿ ಘಟಕದಲ್ಲಿ ಶುದ್ಧೀಕರಿಸಿದ ನೀರನ್ನು ಸಂಪೂರ್ಣವಾಗಿ R.O ಮುಖಾಂತರ ಕೈಗಾರಿಕಾ ಉದ್ದೇಶಕ್ಕಾಗಿ ಮರು ಬಳಕೆ ಮಾಡುತ್ತಿದ್ದಾರೆ. ಇದು ಶೂನ್ಯ ದ್ರವ ವಿಸರ್ಜನಾ ಘಟಕವಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶದನ್ವಯ ಸದರಿ ಉದ್ದಿಮೆಯವರು R.O ಮುಖಾಂತರ ಬರುವ R.O rejectನ ನೀರಿನ ಗುಣಮಟ್ಟದ ಮಾಪನ ಮಾಡಲು ನಿರಂತರ Online Monitoring System ಅನ್ನು ಅಳವಡಿಸಿದ್ದಾರೆ. ಸದರಿ ಮಾಪನವನ್ನು http:\\115.114.10.246:8080\enviroconnect ಈ ಲಿಂಕಿನಲ್ಲಿ ವೀಕ್ಷಿಸಬಹುದಾಗಿದೆ ಮತ್ತು ಈ ಮಾಪನದ ವರದಿಯನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರ್‌ಗೆ ಸಂಪರ್ಕ ನೀಡಲಾಗಿದೆ. ಘಟಕದಲ್ಲಿ ಶುದ್ಧೀಕರಿಸಿದ ನೀರನ್ನು ಉದ್ದಿಮೆಯಲ್ಲಿ ತೋಟಗಾರಿಕೆಗೆ ಬಳಸುತ್ತಿದ್ದಾರೆ. ಸದರಿ ಉದ್ದಿಮೆಯಿಂದ ತ್ಯಾಜ್ಯ ನೀರು ಹೊರಗಡೆ ಮತ್ತು ನದಿಗೆ ವಿಸರ್ಜನೆ ಆಗುತ್ತಿಲ್ಲ. ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದ ಮುಖಾಂತರ Storm Water drain ಸದರಿ ಉದ್ದಿಮೆಯ ಒಳಗಿನಿಂದ ಹಾದು ಹೋಗುತ್ತದೆ ಹಾಗೂ ಸದರಿ ಚರಂಡಿಯಲ್ಲಿ ಯಾವುದೇ

(64)

MYS/2849/17



ತ್ಯಾಜ್ಯ ನೀರು ವಿಸರ್ಜನೆ ಆಗುತ್ತಿರುವುದು ಕಂಡು ಬಂದಿಲ್ಲ. ಮಂಡಳಿಯು ಸದರಿ ಉದ್ದಿಮೆಯ ನಿರಂತರ ಪರಿವೀಕ್ಷಣೆಯನ್ನು ಸಹ ನಡೆಸುತ್ತಿದೆ;

2) ಮೆ॥ ಜುಬಿಲಿಯೆಂಟ್ ಜೆನರಿಕ್ಸ್ ಲಿ., ಉದ್ದಿಮೆಯು ಔಷಧಿ ತಯಾರಿಕಾ ಘಟಕವಾಗಿದ್ದು, ಸದರಿ ಉದ್ದಿಮೆಗೆ ಜಲ (ಮಾಲಿನ್ಯ ಮತ್ತು ನಿಯಂತ್ರಣ) ಅಧಿನಿಯಮ ಮತ್ತು ವಾಯು (ಮಾಲಿನ್ಯ ಮತ್ತು ನಿಯಂತ್ರಣ) ಅಧಿನಿಯಮ ಗಳಡಿಯಲ್ಲಿ ಸಮ್ಮತಿ ಪತ್ರವನ್ನು ಬೆಂಗಳೂರಿನ ಕೇಂದ್ರ ಕಛೇರಿಯಿಂದ ದಿ:19/12/16ರಂದು ನೀಡಿ, ಸದರಿ ಸಮ್ಮತಿ ಪತ್ರದ ಅವಧಿಯು ದಿ:30/06/2021 ರವರಗೆ ಇದೆ. ಅದಲ್ಲದೆ, ಅಪಾಯಕಾರಿ ಘನ ತ್ಯಾಜ್ಯ (ನಿರ್ವಹಣೆ ಮತ್ತು ವ್ಯವಸ್ಥಾಪನೆ) ನಿಯಮ, 2008ರಡಿಯಲ್ಲಿ ಅಧಿಕಾರ ಪತ್ರವನ್ನು ಬೆಂಗಳೂರಿನ ಕೇಂದ್ರ ಕಛೇರಿಯಿಂದ ನೀಡಿದ್ದು, ಅದರ ಅಧಿಕಾರಾವಧಿಯು ದಿ:30/06/2019ರವರೆಗೆ ಇದೆ. ಸದರಿ ಉದ್ದಿಮೆಯಲ್ಲಿ ಉತ್ಪತ್ತಿಯಾಗುವ ಅಪಾಯಕಾರಿ ಘನ ತ್ಯಾಜ್ಯ ವಸ್ತುಗಳನ್ನು ನಿಯಮಾನುಸಾರ ಮಂಡಳಿಯಿಂದ ಸಮ್ಮತಿ ಪತ್ರ ಪಡೆದಿರುವ Recyclers / Re-processors/ Land fill/ Co-incineration ಸೌಲಭ್ಯಗಳಿಗೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕಳುಹಿಸುತ್ತಿದ್ದಾರೆ. ಸದರಿ ಉದ್ದಿಮೆಗಳಲ್ಲಿ ವಾಯು ಮಾಲಿನ್ಯದ ಮೂಲಗಳಿಗೆ ಸೂಕ್ತ ಹೊಗೆ ಕೊಳವೆ ಮತ್ತು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದ್ದಾರೆ. ಉದ್ದಿಮೆಯಲ್ಲಿರುವ Captive incineration ಸೌಲಭ್ಯಗಳನ್ನು ಏಪ್ರಿಲ್, 2017 ರಿಂದ ನಿಲ್ಲಿಸಿದ್ದಾರೆ. ಮಂಡಳಿಯ ಹಿರಿಯ ಪರಿಸರಾಧಿಕಾರಿ, ವಲಯ ಕಛೇರಿ, ಮೈಸೂರು ರವರ ಸಮ್ಮುಖದಲ್ಲಿ ತಮ್ಮ ಕಛೇರಿಯ ಅಧಿಕಾರಿಗಳು ಜಂಟಿಯಾಗಿ ದಿ:27/07/17ರಂದು ಪರಿವೀಕ್ಷಣೆ ಮಾಡಿದ್ದು, ಸದರಿ ಸಮಯದಲ್ಲಿ ಯಾವುದೇ ತ್ಯಾಜ್ಯ ನೀರು ಉದ್ದಿಮೆಯಿಂದ ಹೊರಗಡೆ ಮತ್ತು ನದಿಗೆ ವಿಸರ್ಜನೆ ಆಗುತ್ತಿಲ್ಲ. ಕಛೇರಿಯ ಅಧಿಕಾರಿಗಳು ದಿ:23/10/17ರಂದು ಉದ್ದಿಮೆಯಲ್ಲಿ ಪರಿವೀಕ್ಷಣೆ ನಡೆಸಿದ್ದು, ಆ ಸಮಯದಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಮತ್ತು ಗೃಹ ತ್ಯಾಜ್ಯ ನೀರು ಘಟಕಗಳು ಕಾರ್ಯಾಚರಣೆಯಲ್ಲಿವೆ. ಮುಂದುವರೆದು, ಮಂಡಳಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು GEMS / MINARS ಹಾಗೂ ಮಂಡಳಿ ಯೋಜನೆ ಅಡಿಯಲ್ಲಿ ನದಿಗಳ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಮಾಪನ ಮಾಡುತ್ತಿದ್ದು, ಕಬಿನಿ ನದಿಯ ನೀರಿನ ಗುಣಮಟ್ಟವನ್ನು ತಿಳಿಯುವ ಸಲುವಾಗಿ ನಂಜನಗೂಡು ಪಟ್ಟಣದ ದೇಬೂರು, ಕೆ.ಐ.ಎ.ಡಿ.ಬಿ ಮತ್ತು ಸ್ನಾನಘಟ್ಟ ಮೂರು ಸ್ಥಳಗಳಲ್ಲಿ ಮಾಪನ ಕೇಂದ್ರಗಳನ್ನು ಸ್ಥಾಪಿಸಿ, ನದಿಯ ನೀರಿನ ಮಾದರಿಯನ್ನು ಸಂಗ್ರಹಿಸಿ, ಮಂಡಳಿಯು ಪ್ರಾದೇಶಿಕ ಪ್ರಯೋಗಾಲಯ, ಮೈಸೂರು ಇಲ್ಲಿ ವಿಶ್ಲೇಷಿಸಿ, ವಿಶ್ಲೇಷಣಾ ವರದಿಗಳನ್ನು ಪ್ರತಿ ತಿಂಗಳು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಮೊದಲ ಎರಡು ಮಾಪನ ಕೇಂದ್ರಗಳಲ್ಲಿ ಕಬಿನಿ ನೀರಿನ ಗುಣಮಟ್ಟವು 'ಸಿ' ವರ್ಗಕ್ಕೆ ಅಂದರೆ Drinking Water source conventional treatment followed by dis-infection ಮತ್ತು 3ನೇ ಮಾಪನ ಕೇಂದ್ರದಲ್ಲಿ ಕಬಿನಿ ನೀರಿನ ಗುಣಮಟ್ಟವು 'ಡಿ' ವರ್ಗಕ್ಕೆ ಅಂದರೆ Propagation of Wild life Fisheries ಗೆ ಬರುತ್ತದೆ. ಅಲ್ಲದೆ, ದಿನಾಂಕ:03/08/17ರಂದು

N. Anand

ನಂಜನಗೂಡು ಸೇತುವೆ ಮತ್ತು ಸ್ನಾನಘಟ್ಟದ ಬಳಿ ಕಬಿನಿ ನೀರಿನ ಮಾದರಿಯನ್ನು ಮಂಡಳಿಯ ಹಿರಿಯ ಪರಿಸರಾಧಿಕಾರಿಗಳು ಸಂಗ್ರಹಿಸಿದ್ದು, ಅದರಲ್ಲಿ ಯಾವುದೇ ಹಾನಿಕಾರಕ ರಾಸಾಯನಿಕಗಳು ಇರುವುದು ಕಂಡು ಬಂದಿಲ್ಲ. ನಂಜನಗೂಡು ನಗರಸಭೆ ವ್ಯಾಪ್ತಿಯಿಂದ ಹೊರಹೊಮ್ಮುವ ಗೃಹ ತ್ಯಾಜ್ಯ ನೀರು ಕಬಿನಿ ನದಿಯ ಮಾಲಿನ್ಯಕ್ಕೆ ಕಾರಣವಾಗಿದೆ ಹಾಗೂ ನಗರಸಭೆ, ನಂಜನಗೂಡು ರವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದೆ. ಉದ್ದಿಮೆಯವರು ಯಾವುದೇ ನಿಯಮವನ್ನು ಉಲ್ಲಂಘಿಸಿದ್ದಲ್ಲಿ, ಕಾನೂನು ಕ್ರಮ ಜರುಗಿಸಲಾಗುವುದೆಂದು ಹೇಳಿದ್ದಾರೆ.

---

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರಲ್ಲಿ, ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ಮಾಲಿನ್ಯಕ್ಕೆ ಕುಮ್ಮಕ್ಕು ನೀಡಲು ಎದುರುದಾರರುಗಳು ಉದ್ದಿಮೆರವರಿಗೆ ಸಹಕರಿಸುತ್ತಿರುವಲ್ಲಿ ಸಂದೇಹವಿಲ್ಲವೆಂದು ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ನಂಜನಗೂಡು ಕೈಗಾರಿಕಾ ಪ್ರದೇಶದ ಪ್ಲಾಟ್ ನಂ.18, 56, 57, ಮತ್ತು 58ರಲ್ಲಿ ಮೆ:ಜೂಬಿಲಿಯೆಂಟ್ ಜೆನರಿಕ್ ಪ್ರೈ. ಲಿ., ಉದ್ದಿಮೆಯು ಔಷಧ ತಯಾರಿಕಾ ಘಟಕವನ್ನು ನಡೆಸುತ್ತಿದೆ. ಸದರಿ ಉದ್ದಿಮೆಯು ಜಲ [ಮಾಲಿನ್ಯ ಮತ್ತು ನಿಯಂತ್ರಣ] ಅಧಿನಿಯಮ, 1974 ಮತ್ತು ವಾಯು [ಮಾಲಿನ್ಯ ಮತ್ತು ನಿಯಂತ್ರಣ] ಕಾಯಿದೆ, 1981ರಡಿಯಲ್ಲಿ ಸಮ್ಮತಿ ಪತ್ರವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆದಿದ್ದು, ಸದರಿ ಸಮ್ಮತಿ ಪತ್ರವು ದಿ:29/04/16 ರಿಂದ 30/06/2021ರವರೆಗೆ ಊರ್ಜಿತದಲ್ಲಿದೆ. ಮುಂದುವರೆದು, ಅಪಾಯಕಾರಿ ಘನ ತ್ಯಾಜ್ಯ [ನಿರ್ವಹಣೆ ಮತ್ತು ವ್ಯವಸ್ಥಾಪನೆ] ನಿಯಮ, 2008ರಡಿಯಲ್ಲಿ ಸದರಿ ಉದ್ದಿಮೆಯು ಅಧಿಕಾರ ಪತ್ರವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದಿ:08/09/15ರಂದು ಪಡೆದಿದ್ದು, ಸದರಿ ಸಮ್ಮತಿ ಪತ್ರವು ದಿ:01/07/15 ರಿಂದ 30/06/2019ರವರೆಗೆ ಊರ್ಜಿತದಲ್ಲಿದೆ;

2) ಸದರಿ ಔಷಧ ತಯಾರಿಕಾ ಘಟಕದಿಂದ ಹೊರಹೊಮ್ಮುವ ತ್ಯಾಜ್ಯ ನೀರನ್ನು ಶುದ್ಧೀಕರಿಸಲು 240 ಕೆಎಲ್‌ಡಿ ಸಾಮರ್ಥ್ಯದ ಶುದ್ಧೀಕರಣ ಘಟಕವನ್ನು ಅಳವಡಿಸಿ, ಶುದ್ಧೀಕರಿಸಿದ ನೀರನ್ನು R.O ಮುಖಾಂತರ ಕೈಗಾರಿಕಾ ಉದ್ದೇಶಕ್ಕಾಗಿ ಮರುಬಳಕೆ ಮಾಡಲಾಗುತ್ತಿದೆಯೆಂದು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿ ಮತ್ತು ಅದಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಅನುಬಂಧ–5ರಲ್ಲಿ ಸಲ್ಲಿಸಿದ್ದಾರೆ;

3) The Water (Prevention & Control of Pollution) Act, 1974ನ 5ನೇ ಅಧ್ಯಾಯ (ಕಲಂ 19 ರಿಂದ 33ಎ) ದಲ್ಲಿ ನೀರಿನ ಮಾಲಿನ್ಯ ತಡೆ ಮತ್ತು ನಿಯಂತ್ರಣದ ಬಗ್ಗೆ ತಿಳಿಸಿದೆ. ಕಲಂ 21ರಲ್ಲಿ Power to take samples of effluents and procedure to be followed in connection

n. Ananel

therewithರ ಬಗ್ಗೆ ಹೇಳಿದ್ದು, ರಾಜ್ಯ ಮಾಲಿನ್ಯ ಮಂಡಳಿ ಅಥವಾ ಅದರಿಂದ ಅಧಿಕೃತಗೊಂಡ ಯಾವುದೇ ಅಧಿಕಾರಿಯು ನೀರಿನ ಮಾದರಿಯನ್ನು ಪಡೆಯುವ ಅಧಿಕಾರವನ್ನು ಹೊಂದಿದವರಾಗಿದ್ದಾರೆ. ನೀರಿನ ಮಾದರಿಯನ್ನು ಪಡೆಯುವ ವಿಧಾನ ಮತ್ತು ಆ ನಂತರ ಜರುಗಿಸಲಾಗುವ ಪ್ರಕ್ರಿಯೆಯ ಬಗ್ಗೆ ಕಲಂ 21ರ ಸಹ ಕಲಂ (3) ರಿಂದ (5) ರಲ್ಲಿ ಹೇಳಿದೆ. ಆದರೆ, ಅದ್ಯಾವ ಪ್ರಕ್ರಿಯೆಯನ್ನು 2ನೇ ಎದುರುದಾರರು ಜರುಗಿಸದೇ ನಂಜನಗೂಡು ಪಟ್ಟಣದ ವ್ಯಾಪ್ತಿಯಲ್ಲಿ ಹರಿಯುವ ಕಬಿನಿ ನದಿಯ ನೀರಿನ ಮಾದರಿಯನ್ನು ದೇಬೂರು, ಕೆಐಎಡಿಬಿ ಪ್ರದೇಶ ಮತ್ತು ಸ್ನಾನಘಟ್ಟ ಗಳಿಂದ ಸಂಗ್ರಹಿಸಿ, ಮೈಸೂರಿನ ಪ್ರಾದೇಶಿಕ ಪ್ರಯೋಗಾಲಯಕ್ಕೆ ಕಳುಹಿಸಿ, ನದಿ ನೀರಿನ ಗುಣಮಟ್ಟ ವರದಿಯನ್ನು ಪಡೆದಿರುವುದು ಅನುಬಂಧ-6 ಮತ್ತು 7 ದಾಖಲೆಗಳಲ್ಲಿ ಕಂಡು ಬಂದಿದೆ;

4) ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಮೆ||ಜೂಬಿಲಿಯೆಂಟ್ ಜೆನರಿಕ್ ಪ್ರೈ. ಲಿ., ಉದ್ದಿಮೆಯ ಔಷಧ ತಯಾರಿಕಾ ಘಟಕದಿಂದ ಹೊರಸೂಸುತ್ತಿರುವ ಕಲುಷಿತ ನೀರಿನ ಮಾಲಿನ್ಯದ ಪ್ರಮಾಣವನ್ನು ಪರಿಶೀಲಿಸಲು ಕಾಯಿದೆಯ ಕಲಂ 23ರಲ್ಲಿ ಅಧಿಕಾರವಿದ್ದರೂ, 2ನೇ ಎದುರುದಾರರು ಘಟಕಕ್ಕೆ ಖುದ್ದು ಭೇಟಿ ನೀಡದೇ ಮತ್ತು ಕಲಂ 21ರ ಸಹ ಕಲಂ (3) ರಿಂದ (5) ರಲ್ಲಿ ಹೇಳಿದ ಪ್ರಕ್ರಿಯೆಯಂತೆ ನೀರಿನ ಮಾದರಿಯನ್ನು ಪಡೆಯದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ;

5) ಮುಂದುವರೆದು, ಸದರಿ ಘಟಕದಿಂದ ಹೊರಸೂಸುತ್ತಿರುವ ಕಲುಷಿತ ಹೊಗೆಯು The Air (Prevention & Control of Pollution) Act, 1981 ಕಾಯಿದೆಯ ಕಲಂ 17(1)(ಜಿ)ರಲ್ಲಿ ಮಾಲಿನ್ಯ ಮಂಡಳಿಯು ನಿಗಧಿಪಡಿಸಿದ ಪರಿಮಾಣಕ್ಕಿಂತ ಹೆಚ್ಚಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು 2ನೇ ಎದುರುದಾರರು ಪರಿಶೀಲಿಸಿ, ರಾಜ್ಯ ಮಂಡಳಿಗೆ ವರದಿಯನ್ನು ಸಲ್ಲಿಸಿದ ಬಗ್ಗೆ ದಾಖಲೆಗಳಿಲ್ಲವಾದ್ದರಿಂದ, 2ನೇ ಎದುರುದಾರರ ಕರ್ತವ್ಯ ಲೋಪವು ಮೇಲ್ನೋಟಕ್ಕೆ ಸಾಬೀತಾಗಿದೆ;

6) ಸದರಿ ಔಷಧ ತಯಾರಿಕಾ ಘಟಕವು ದೇಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದ್ದು, 1ನೇ ಎದುರುದಾರರು ಸದರಿ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ;

7) ಯಾವುದೇ ಗ್ರಾಮ ಪಂಚಾಯತಿಯ ಪರಿಮಿತಿಯೊಳಗೆ ಯಾವುದೇ ವ್ಯಾಪಾರದ ಅಥವಾ ಯಾವುದೇ ತಯಾರಿಕೆಯ ಉದ್ದೇಶಕ್ಕಾಗಿ ಬಳಸುವ ಯಾವುದೇ ಕಾಮಗಾರಿಯಲ್ಲಿ ಅಥವಾ ಕಟ್ಟಡದಲ್ಲಿ ಅಳವಡಿಸಿರುವ ಅಥವಾ ಅಳವಡಿಸಿಕೊಳ್ಳುವ ಪ್ರತಿಯೊಂದು ಕುಲುಮೆಯನ್ನು, ಅದರಲ್ಲಿ ಉಗಿಯಂತ್ರವನ್ನು ಬಳಸಿರಲಿ ಅಥವಾ ಇಲ್ಲದಿರಲಿ ಅಥವಾ ಅಳವಡಿಸಿರಲಿ ಅಥವಾ ಇಲ್ಲದಿರಲಿ, ಎಲ್ಲ ಸಂದರ್ಭಗಳಲ್ಲಿಯೂ ಅಂಥ ಕುಲುಮೆಯಿಂದ ಹೊರಬರುವ ಹೊಗೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಆ ಉಗಿಯಂತ್ರವು ನಾಶ ಮಾಡುವ ಹಾಗೆ ಅಥವಾ ಸುಡುವ ಅಥವಾ ಕಡಿಮೆ ಮಾಡುವ ಹಾಗೆ ಅದನ್ನು ನಿರ್ಮಿಸತಕ್ಕದ್ದೆಂದು, ಅದಕ್ಕೆ ಪೂರಕವಾಗಿ ಬೇರೇನನ್ನಾದರೂ ನಿರ್ಮಿಸತಕ್ಕದ್ದೆಂದು ಅಥವಾ ಅದನ್ನು ಮಾರ್ಪಡಿಸತಕ್ಕದ್ದೆಂದು ಸಾರ್ವಜನಿಕ

N. Anand

ನೋಟೀಸು ನೀಡುವ ಮೂಲಕ ಗ್ರಾಮ ಪಂಚಾಯತಿಯು ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಕಲಂ 109ರಲ್ಲಿ ನಿರ್ದೇಶಿಸಬಹುದಾಗಿದೆ;

8) ಮುಂದುವರೆದು, ಹೊಲಸು ನೀರಿನಿಂದಾಗುವ ಉಪದ್ರವವನ್ನು ತಡೆಯಲು ಅದೇ ಕಾಯಿದೆಯ ಕಲಂ 87ರಲ್ಲಿ ಪಂಚಾಯತ್ ಕಾರ್ಯದರ್ಶಿ\ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ಅಧಿಕಾರವಿದೆ. ಯಾವುದೇ ಕುಂಟೆ, ಗುಂಡಿ, ಕೆರೆ, ಕೊಳ, ಬಾವಿ, ರಂಧ್ರ ಅಥವಾ ನಿರುಪಯುಕ್ತ ಅಥವಾ ನಿಂತ ನೀರು ಅಥವಾ ಹೊಲಸು ನೀರಿನ ಯಾವುದೇ ಕಾಲುವೆ ಅಥವಾ ಜಲಪಾತ್ರ ಅಥವಾ ಇತರ ಅಸಹ್ಯಕರ ಅಥವಾ ಹಾನಿಕಾರಕ ವಸ್ತುವು ಅದು ಯಾವುದೇ ಖಾಸಗಿ ಆವರಣದೊಳಗೆ ಇರಲಿ ಅಥವಾ ಬೇರೆಲ್ಲೇ ಇರಲಿ, ಅದು ನಿವಾಸಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗುವ ಅಥವಾ ನೆರೆಹೊರೆಯವರಿಗೆ ಅಸಹ್ಯಕರವಾಗುವ ಸಂಭವವಿದೆಯೆಂದು ಕಾರ್ಯದರ್ಶಿಗೆ ಕಂಡುಬಂದರೆ, ಕಾರ್ಯದರ್ಶಿಯು ಅದರ ಮಾಲೀಕನಿಗೆ ಲಿಖಿತ ನೋಟೀಸಿನ ಮೂಲಕ ಅದನ್ನು ಸ್ವಚ್ಛಗೊಳಿಸಲು, ಮುಚ್ಚಿಹಾಕಲು ಹರಿದು ಹೋಗುವಂತೆ ಮಾಡಲು ಅಥವಾ ಅದನ್ನು ತೆಗೆದುಹಾಕಲು ಅಥವಾ ಆ ಉಪದ್ರವವನ್ನು ತಡೆಯಲು ಅಥವಾ ತೆಗೆದು ಹಾಕಲು ಅವಶ್ಯವಿರತಕ್ಕಂಥ ಕ್ರಮಗಳನ್ನು ಕೈಗೊಳ್ಳಲು ಸದರಿ ಕಲಂ ಅಡಿ ಅಗತ್ಯಪಡಿಸಬಹುದು;

9) ಆದರೆ, ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಕಲಂ 87 ರಲ್ಲಾಗಲೀ ಅಥವಾ 109 ರಲ್ಲಾಗಲೀ ನೀಡಿರುವ ಅಧಿಕಾರವನ್ನು ಚಲಾಯಿಸದೇ, ಕಾರ್ಖಾನೆಯಿಂದ ಹೊರಸೂಸುತ್ತಿರುವ ನೀರನ್ನು ಕಬಿನಿ ನದಿಗೆ ಬಿಡದೇ ಕಾರ್ಖಾನೆ ವ್ಯಾಪ್ತಿಯಲ್ಲಿಯೇ ಪರ್ಯಾಯ ಕ್ರಮವನ್ನು ವಹಿಸಲು ಸೂಚಿಸಿ, ಕಾರ್ಖಾನೆಯ ವ್ಯವಸ್ಥಾಪಕರಿಗೆ 1ನೇ ಎದುರುದಾರರು ದಿ:24/05/17ರ ನೋಟೀಸನ್ನು ಮಾತ್ರ ನೀಡಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ಮತ್ತು 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಮೆ॥ಜೂಬಿಲಿಯೆಂಟ್ ಜೆನರಿಕ್ ಪ್ರೈ. ಲಿ., ಉದ್ದಿಮೆಯ ಔಷಧ ತಯಾರಿಕಾ ಘಟಕದಿಂದ ಹೊರಸೂಸುತ್ತಿರುವ ಕಲುಷಿತ ನೀರು ಮತ್ತು ಹೊಗೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ತಡೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ

mys/2849/17



ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 26/8

(ನ್ಯಾಯಮೂರ್ತಿ ಎನ್.ಆನಂದ)

ಉಪಲೋಕಾಯುಕ್ತ,

ಕರ್ನಾಟಕ ರಾಜ್ಯ.